## ವಾಸ್‌ದೇವ್ ಮೋಹಿ


ಚಿದಾನಂದ ಸಾಲಿ, ವಾಸ್‌ದೇವ್ ಮೋಹಿ

ಅಹ್ಮದಾಬಾದ್ ನಿವಾಸಿ ವಾಸ್‌ದೇವ್ ಮೋಹಿಯವರು ಸಿಂಧಿ ಭಾಷೆಯ ಪ್ರಮುಖ ಲೇಖಕರು. ಕವಿ, ಕತೆಗಾರ, ಗಜಲ್‌ಕಾರ, ಅನುವಾದಕ, ಸಂಪಾದಕ ಮೋಹಿಯವರು ಎಂ.ಎ (ಇಂಗ್ಲಿಷ್); ಎಂಎಡ್ ಪದವೀಧರರಾಗಿದ್ದು ದುಬೈಯ ಇಂಡಿಯನ್ ಹೈಸ್ಕೂಲಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರು. 'ತಜಾದ್', 'ಸುಬುಹ್ ಕಿತೆ ಆಯೆ', 'ಮಣಕೂ', 'ಬರ್ಫ್ ಜೊ ಠಹಿಯಲು', 'ಚುಂಹಿಂಬ್ ಮೆ ಕಖು', 'ರೇಲ್ ಜಿ ಪಟೀಡಿ ಮೇರಿ', 'ಖಾಮೋಂಶಿ ಖೆ ಲಿಖ್‌ದೊ ಆಹಿಯ್ಯಾಂ' ಕವನ ಸಂಕಲನಗಳು; 'ಚೆಕ್‌ಬುಕ್', 'ಡೇಡ್ ಗಂಟ್' ಕಥಾಸಂಕಲನಗಳು; 'ಏಕಲವ್ಯ' ನಾಟಕ ಸೇರಿದಂತೆ ಅನುವಾದ, ಲೇಖನ, ವಿಮರ್ಶೆ, ಸಂಪಾದನೆ ಮುಂತಾದ ಪ್ರಕಾರಗಳಲ್ಲಿ ಕೃತಿಗಳು ಪ್ರಕಟ. ಗುಜರಾತ್ ಸಿಂಧಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗುಜರಾತ್ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಷ್ಟ್ರೀಯ ಸಿಂಧಿ ಭಾಷಾ ವಿಕಾಸ್ ಪರಿಷದ್ ದೆಹಲಿ ಪ್ರಶಸ್ತಿ, ಸಿಂಧಿ ಅಕಾಡೆಮಿ ದೆಹಲಿ ಪ್ರಶಸ್ತಿ, ಸಂಬಲ್‌ಪುರ್ ವಿಶ್ವವಿದ್ಯಾಲಯದ ಗಂಗಾಧರ್ ಮೆಹರ್ ರಾಷ್ಟ್ರೀಯ ಕಾವ್ಯ ಪುರಸ್ಕಾರ್, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಸರಸ್ವತಿ ಸಮ್ಮಾನ್ ಪುರಸ್ಕಾರದ ಗೌರವ.

ಮತ್ತು ಅಭಿಮಾನಪಡುವ ಕವಿಯೆಂದರೆ ಅರ್ಜನ್ ಹಸಿದ್ (1930–2019). ಅವರೊಬ್ಬ ಶ್ರೇಷ್ಠ ಗಜಲ್‌ಕಾರರು. ಅವರ ಗಜಲ್‌ಗಳು ಉತ್ಕೃಷ್ಟವಾದುವು. ಅವರಿಂದ ನಾನು ಸಾಕಷ್ಟು ಕಲಿತಿದ್ದರೂ ನಮ್ಮಿಬ್ಬರ ವೈಯಕ್ತಿಕ ಶ್ರುತಿಗಳು ಭಿನ್ನ ಮನೋಧರ್ಮದ ಮೇಲೆ ರೂಪಿತವಾದಂಥವು. ಹಾಗಾಗಿ ನಮ್ಮಿಬ್ಬರ ಶೈಲಿಗಳಲ್ಲಿ ಹೋಲಿಕೆಯೇ ಇಲ್ಲ.

◆ **ದೇಶದ ಎಲ್ಲೆಡೆ ಚದುರಿದಂತೆ ಹಂಚಿ ಹರಡಿಹೋಗಿರುವ ಸಿಂಧಿ ಭಾಷಿಕರಿಗೆ ಪೂರ್ವದ ನೆಲೆಯೂ ಉಳಿದಿಲ್ಲ; ಪ್ರಸ್ತುತದಲ್ಲಿ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವೂ ದೇಶದಲ್ಲಿಲ್ಲ. ಈ ಸಂಗತಿ ನಿಮ್ಮನ್ನು ತಾಕಿದ ಬಗೆಯ ಬಗ್ಗೆ ಹೇಳಿ. ಪರಿಸ್ಥಿತಿ ಹೀಗಿರುವಾಗ ಭಾಷೆಯ ಭಾವನಾತ್ಮಕ ಎಳೆಯ ಮೂಲಕವೇ ಸಿಂಧಿ ಸಮುದಾಯವನ್ನು ಒಗ್ಗೂಡಿಸಿ ಹಿಡಿದಿಡುವ ಕೆಲಸವು ಎಷ್ಟು ದೂರದವರೆಗೆ ಸಾಗೀತು ಅಂತ ನಿಮಗನಿಸುತ್ತೆ?**

ನಿಜ. ಭಾರತೀಯ ಸಿಂಧಿ ಭಾಷಿಕರಿಗೆ ಅವರದೇ ಎಂಬಂಥ ನಿರ್ದಿಷ್ಟ ಭೌಗೋಳಿಕ ಪ್ರದೇಶ ಇಲ್ಲ. ವಿಭಜನೆಯ ನಂತರ ಸಿಂಧಿಗಳಿಗೆ ಇದ್ದ ಮುಖ್ಯ ಸಮಸ್ಯೆಯೆಂದರೆ ಎಲ್ಲಾದರೂ ಒಂದು ಕಡೆ, ಯಾವುದಾದರೂ ಒಂದು ರಾಜ್ಯದಲ್ಲಿ ನೆಲೆ ಕಂಡುಕೊಳ್ಳುವುದು. ಹೊಟ್ಟೆಗಿಷ್ಟು ಹಿಟ್ಟು, ತಲೆ ಮೇಲೊಂದು ಸೂರು ಮಾಡಿಕೊಳ್ಳುವುದು. ಅವರು ತಮ್ಮ ಪೂರ್ವದ ಸಿಂಧ್ ಪ್ರಾಂತ್ಯದಲ್ಲೇ ತಮ್ಮದೆನ್ನುವ ಎಲ್ಲವನ್ನೂ ಬಿಟ್ಟು ಬಂದವರು. ಹಾಗಾಗಿ ಭಾರತದಲ್ಲಿ ಅವರಿಗೆ ಬೇರೆ ಗತ್ಯಂತರವೇ ಇರಲಿಲ್ಲ. ಉಳಿವೇ ಅವರ ಬಲು ದೊಡ್ಡ ಅಗತ್ಯವಾಗಿತ್ತು. ಅವರದ್ದೇ ಒಂದು ನಿರ್ದಿಷ್ಟ ಪ್ರದೇಶವೆಂಬುದು ಇಲ್ಲದಿರುವುದರಿಂದಲೇ ಅವರಿಗೆ ರಾಜಕೀಯವಾಗಿ ಬಲವಾದ ಬೆನ್ನೆಲುಬೇ ಇಲ್ಲದಂತಾಗಿದೆ. ಬಂಗಾಳ ಪ್ರಾಂತ್ಯವು ಪಶ್ಚಿಮ ಬಂಗಾಳ ಮತ್ತು ಪೂರ್ವ ಬಂಗಾಳವಾದಂತೆ